ಈ ದಿನ ದಿನಾಂಕಃ 08-11-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಬಿ ಆರ್ ಎಂ ವಕೀಲರಿಂದಃ</u>

ನನ್ನ ತಂದೆ 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. 1987 ರಲ್ಲಿ ದಾವಾ ಸ್ವತ್ತನ್ನು ನನ್ನ ತಂದೆ ಶಿವಲಿಂಗಪ್ಪ ಬಿನ್ ದ್ಯಾಮಪ್ಪನವರಿಂದ ಖರೀದಿಸಿರುತ್ತಾರೆ. ಶಿವಲಿಂಗಪ್ಪ ಮರಣ ಹೊಂದಿದ್ದು ಅವರ ಮಗ ಜೀವಂತ ಇದ್ದಾರೆ. ಮಾರಾಟದ ಕಾಲಕ್ಕೆ ದಾವಾ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಶಿವಲಿಂಗಪ್ಪನವರಿಗೆ ಯಾವ ರೀತಿ ಪ್ರಾಪ್ತವಾಗಿತ್ತು ಎಂದು ನನಗೆ ಗೊತ್ತಿಲ್ಲ. ಆತನ ತಂದೆಗೆ ಪ್ರಾಪ್ತವಾದ ಬಗ್ಗೆ ಸಹ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೂಲ ಖಾತೆ ಸಂ. 73 ಈಗ 177 ಆಗಿದೆ. ನನ್ನ ತಂದೆ ಮರಣ ನಂತರ ದಾವಾ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಬದಲಾಯಿಸಿಕೊಂಡಿರುತ್ತೇನೆ.

2. ಕ್ರಯದ ತರುವಾಯ ದಾವಾ ಸ್ವತ್ತಿನ ಖಾತೆ 1987 ರಲ್ಲಿ ನನ್ನ ತಂದೆ ಹೆಸರಿಗೆ ಬದಲಾಗಿರುತ್ತದೆ. ದಾವಾ ಸ್ವತ್ತು ನಮಗೆ ಕ್ರಯಕ್ಕೆ ಕೊಟ್ಟವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ದ್ಯಾಮಪ್ಪನವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿಯಲ್ಲ. ದ್ಯಾಮಪ್ಪನವರ ಹೆಸರಿಗಿದ್ದ ಆಸ್ತಿಗಳ ಖಾತೆಗಳು ಬೇರೆ ಯಾರ ಹೆಸರಿಗೂ ವಾರಸುದಾರರಿಲ್ಲದ ಕಾರಣಕ್ಕಾಗಿ ಬದಲಾಗಿಲ್ಲ ಎಂದರೆ ಸರಿಯಲ್ಲ. ದ್ಯಾಮಪ್ಪನವರಿಗೆ ಅವರ ಸಹೋದರ ರಂಗಪ್ಪನವರ ಮಗನಾದ ಪ್ರತಿವಾದಿಯೇ ವಾರಸುದಾರನಾಗಿದ್ದು ದಾವಾ ಸ್ವತ್ತಿನ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

3. ಈಗ ನೋಡುತ್ತಿರುವ ಬಾವಚಿತ್ರದಲ್ಲಿರುವುದು ದಾವಾ ಸ್ವತ್ತು. ಸಾಕ್ಷಿ ಸದರಿ ಬಾವಚಿತ್ರವನ್ನು ಒಪ್ಪಿದ್ದರಿಂದ <u>**ನಿಡಿ 1**</u> ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ಕಾಣುತ್ತಿರುವ ವ್ಯಕ್ತಿ ಪ್ರತಿವಾದಿ ಎಂದರೆ ಸರಿ. ಈಗ ನೋಡುತ್ತಿರುವ ಇನ್ನೊಂದು ಬಾವಚಿತ್ರ ದಾವಾ ಸ್ವತ್ತಿನದು ಎಂದರೆ ಸರಿಯಲ್ಲ. ಅದರಲ್ಲಿ ಪ್ರತಿವಾದಿ ಕುರಿ ಕಟ್ಟಲು ರೊಪ್ಪ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತಾದ ಕಾರಣಕ್ಕಾಗಿ ದಾವಾ ಸ್ವತ್ತಿನಲ್ಲಿ ಕುರಿ ರೊಪ್ಪವನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ಆಸ್ತಿ ಸಂ. 58 ಎಂದರೆ

ಸರಿಯಲ್ಲ. ಖಾತೆ ಸಂ. 58, 177, 73 ಕ್ಕೆ ಸೇರಿದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ಖಾತೆ ಸಂ. 58 ರಲ್ಲಿ ಖಾತೆ ಸಂ. 177 ಇರುವುದಿಲ್ಲ ಎಂದರೆ ಸಾಕ್ಷಿ ಖಾತೆ ಸಂ.58, 177 ರಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ.

4. ಸಾಮಾನ್ಯವಾಗಿ ಆಸ್ತಿಗಳ ಸಂಖ್ಯೆ ಅನುಕ್ರಮವಾಗಿ ಒಂದಕ್ಕೊಂದು ಹೊಂದಿಕೊಂಡ ಆಸ್ತಿಗಳಿಗೆ ಕೊಡಲಾಗುತ್ತದೆ ಎಂದರೆ ಸರಿ. ಖಾತೆ ಸಂ. 58 ರ ಪೂರ್ವಕ್ಕೆ ಪಿ.ಡಬ್ಲ್ಯೂಡಿ ರಸ್ತೆ, ಪಶ್ಚಿಮಕ್ಕೆ ಪ್ರತಿವಾದಿ ಸಂಬಂಧಿಕರ ಜಾಗ, ಉತ್ತರಕ್ಕೆ ಎ ಕೆ ಕಾಲೋನಿ, ದಕ್ಷಿಣಕ್ಕ ಪ್ರತಿವಾದಿಗಳ ಮನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಚೆಕ್ಕುಬಂದಿ ಮಧ್ಯದಲ್ಲಿನ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಖಾತೆ ಸಂ. 177 ಈ ಮೇಲೆ ಹೇಳಿದ ಚೆಕ್ಕುಬಂದಿ ಆಸ್ತಿಯ ಪಕ್ಕದಲ್ಲಿಲ್ಲ ಎಂದರೆ ಸರಿಯಲ್ಲ. ಖಾತೆ ಸಂ. 177 ಪೂರ್ವದ ಪಿ.ಡಬ್ಲ್ಯೂಡಿ ರಸ್ತೆಯ ಪೂರ್ವಕ್ಕೆ ಸರ್ವೆ ನಂ. 88 ರಲ್ಲಿದೆ ಎಂದರೆ ಸರಿಯಲ್ಲ. ಅದು 7 ಎಕರೆ ಇದೆ ಎಂದರೆ ಸರಿಯಲ್ಲ. ನಾವು ಸರ್ವೆ ನಂ. 88 ರಲ್ಲಿನ ಆಸ್ತಿಯನ್ನು ಖಾತೆ ಸಂ. 58 ರ ಚೆಕ್ಕುಬಂದಿಗಳನ್ನು ನಮೂದಿಸಿ ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ.

5. ಖಾತೆ ಸಂ. 58 ಮೂಲತಃ ದ್ಯಾಮಪ್ಪ ಬಿನ್ ಸಣ್ಣ ರಂಗಪ್ಪನವರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಅವರ ಮರಣಾಂತರ ವಾರಸುದಾರನಾದ ಪ್ರತಿವಾದಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕಷ್ಟು ಕಾಲವಕಾಶ ನೀಡಿದ್ದರಿಂದ ಅವರ ವಿನಂತಿಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.